3) ಗಿರಿಜನ ಉಪ ಯೋಜನೆ-655.00ಲಕ್ಷ ರೂ.

ಒಟ್ಟು- 914.07ಲಕ್ಷ ರೂ.

ಇಲಾಖಾ ಕಾರ್ಯಕ್ರಮಗಳಿಗಾಗಿ 1993-94ನೇ ಸಾಲಿನಲ್ಲಿ ಈವರೆಗೆ 104.08 ಲಕ್ಷ ರೂ.ಗಳ ಖರ್ಚಾಗಿವೆ. ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪ ಯೋಜನೆಗಳಿಗೆ ಹಣವನ್ನು ಬಿಡುಗಡೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

ವಿಷಯ :- ಹುಬ್ಬಳ್ಳಿಯ ಸಂಜಯ ಸಹಕಾರಿ ನೂಲಿನ ಗಿರಣಿಯನ್ನು ಎನ್.ಸಿ.ಡಿ.ಸಿ 4ನೇ ಯೋಜನೆಯಲ್ಲಿ ಕೈಕೊಳ್ಳುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 146(135)

ಶ್ರೀ ಪಿ.ಸಿ.ಸಿದ್ಧನಗೌಡರ್(ಕಲಘಟಗಿ)

ಮಾನ್ಯ ಜವಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹುಬ್ಬಳ್ಳಿಯಲ್ಲಿ ಸಂಜಯ ಸಹಕಾರಿ ಗಿರಣಿಯನ್ನು ಎನ್.ಸಿ.ಡಿ.ಸಿ. 4ನೇ ಯೋಜನೆಯಲ್ಲಿ ತೆರೆಯಲು ಸರ್ಕಾರದ ಒಪ್ಪಿಗೆಯನ್ನು ಸೂಚಿಸಿ ಕೇಂದ್ರ ಸರ್ಕಾರದ ಅನುಮತಿಗಾಗಿ ಕಳುಹಿಸಲಾಗಿದೆಯೆ;

ಆ) ಹಾಗಿದ್ದಲ್ಲಿ, ಈ ಮೇಲ್ಕಂಡ ಗಿರಣಿಗೆ ತಗಲುವ ಅಂದಾಜು ವೆಚ್ಚವೆಷ್ಟು :

ಇ) ಕೇಂದ್ರ ಸರ್ಕಾರವು ಮೇಲ್ಕಂಡ ಗಿರಣಿಯನ್ನು ಎನ್‌ಸಿಡಿಸಿ 4ನೇ ಯೋಜನೆಯಲ್ಲಿ ತೆಗೆಯಲು ಅನುಮತಿಯನ್ನು ನೀಡಿದೆಯೆ :

ಈ) ನೀಡದಿದ್ದಲ್ಲಿ ಕೂಡಲೇ ಕೇಂದ್ರದ ಅನುಮತಿಯನ್ನು ಹಾಗೂ ಹಣ ಸಹಾಯವನ್ನು ಪಡೆದು ಎನ್‌ಸಿಡಿಸಿ 4ನೇ ಯೋಜನೆಯಲ್ಲಿ ತೆಗೆಯಲು ಸರ್ಕಾರ ಕ್ರಮಕೈಗೊಳ್ಳುವುದೇ?

ಶ್ರೀ ಹೆಚ್.ಕೆ.ಪಾಟೀಲ್

(ಜವಳಿ ರಾಜ್ಯ ಸಚಿವರು)

-ಹೌದು-

ರೂ.2838.00 ಲಕ್ಷಗಳು

ಇನ್ನೂ ಇಲ್ಲ.

ಈ ಪ್ರಸ್ತಾವನೆಯನ್ನು ಈಗಾಗಲೇ ಎನ್‌ಸಿಡಿಸಿ 4ನೇ ಯೋಜನೆಯಡಿಯಲ್ಲಿ ಎತ್ತಿಕೊಳ್ಳಲು ಶಿಫಾರಸ್ಸು ಮಾಡಿದೆ. ಅವಶ್ಯಕ ಕ್ರಮ ಕೈಗೊಳ್ಳಲಾಗುವುದು.

ವಿಷಯ :- ಸ್ಟೈಫೆಂಡರಿ ಪದವೀಧರರನ್ನು ಮೇಲಿನ ದರ್ಜೆಯ ಸಹಾಯಕ ಹುದ್ದೆಗೆ ನೇಮಿಸಿಕೊಳ್ಳುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 147(152)

ಶ್ರೀ ಪಿ.ಸಿ. ಸಿದ್ಧನ ಗೌಡರ್(ಕಲಘಟಗಿ)

ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಒಟ್ಟು ಇರತಕ್ಕ ಸ್ಟೈಪೆಂಡರಿ ಪದವೀಧರರು ಎಷ್ಟು;

ಆ) ಅದರಲ್ಲಿ ಎಷ್ಟು ಜನರನ್ನು ಈಗಾಗಲೇ ಖಾಯಂಗೊಳಿಸಲಾಗಿದೆ;